**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಚನ್ನಗಿರಿ.**

**ಸಿಸಿ ನಂ:1097/2026**

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿತರು :** |
|---|---|---|
| ಸಂತೆಬೆನ್ನೂರು ಪೊಲೀಸ್ ಠಾಣೆ | | 1. ಶಿವಕುಮಾರ<br>ಬಿನ್ ರುದ್ರಪ್ಪ,<br>ವಯಸ್ಸು: 42 ವರ್ಷ,<br><br>2. ಮಧುಸೂಧನ<br>ಬಿನ್ ಚಂದ್ರಶೇಖರಪ್ಪ,<br>ವಯಸ್ಸು: 40 ವರ್ಷ,<br>ಇಬ್ಬರೂ ವಾಸಃ ಸಿದ್ದನಮಠ ಗ್ರಾಮ,<br>ಚನ್ನಗಿರಿ ತಾಲ್ಲೂಕು. |

ಶ್ರೀ.ವಜ್ರೇಶ ಬಿ.ಎ. ಎಲ್.ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನಗಿರಿ ಆದ ನಾನು ಈ ಮೇಲ್ಕಂಡ ಆರೋಪಿತರ ಪರ ವಕೀಲರಾದ ನಿಮ್ಮನ್ನು ಈ ಕೆಳಕಂಡ ಆರೋಪಣೆಗೆ ಗುರಿಪಡಿಸುತ್ತೇನೆ.

**ಆಪಾದನೆ**

ದಿನಾಂಕಃ 19.03.2026 ರಂದು ಸಂಜೆ 7.30 ಗಂಟೆಯಿಂದ ರಾತ್ರಿ 10.00 ಗಂಟೆ ಮಧ್ಯದ ಅವಧಿಯಲ್ಲಿ ಚನ್ನಗಿರಿ ತಾಲ್ಲೂಕು, ಸಂತೆಬೆನ್ನೂರು ಪೊಲೀಸ್ ಠಾಣಾ ವ್ಯಾಪ್ತಿಯ ಸಿದ್ದನಮಠ ಗ್ರಾಮದ ಚಾನಲ್ ರಸ್ತೆಯಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು ಕಾನೂನು ಬಾಹಿರವಾಗಿ ಅಂದರ್-ಬಾಹರ್ ಇಸ್ಪೀಟ್ ಜೂಜಾಟ ಆಡುತ್ತಿದ್ದಾಗ ಸಿಕ್ಕಿ ಹಾಕಿಕೊಳ್ಳುವ ಮೂಲಕ ನೀವು 87 ಕೆ.ಪಿ. ಆಕ್ಟ್ ರ ಮೇರೆಗೆ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಎಸಗಿರುತ್ತಾರೆ?

1. ಈಗ ಓದಿ ಹೇಳಿದ ನಿಮ್ಮ ಮೇಲಿನ ಆಪಾದನೆಯನ್ನು ಕೇಳಿದ್ದೀರಾ? ತಿಳಿಯಿತೇ?

ಆರೋಪಿ 1 ಉತ್ತರಃ

ಆರೋಪಿ 2 ಉತ್ತರಃ

2. ಸದರಿ ಆಪಾದನೆಯನ್ನು ಆರೋಪಿತರ ಪರವಾಗಿ ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

ಆರೋಪಿ 1 ಉತ್ತರಃ

ಆರೋಪಿ 2 ಉತ್ತರಃ

(ಆರೋಪಿತರ ವಕೀಲರಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ 08.07.2026 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಕೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

**ಸ್ಥಳಃ ಚನ್ನಗಿರಿ**

**ದಿನಾಂಕಃ** 08.07.2026

ಸಹಿ/-

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಲಯ, ಚನ್ನಗಿರಿ.**

ಆರೋಪಿತರ ಪರ ವಕೀಲರು